# Akashvani : Bangalore
# National Bulletin In Kannada
# 22.04.2024 / 13.10 hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**22.04.2024 / 13.10 hrs**

<><*<><>*><>

**ಮುಖ್ಯಾಂಶಗಳು**

೧. ದೆಹಲಿಯಲ್ಲಿಂದು ಪ್ರತಿಷ್ಠಿತ ಪದ್ಮಪ್ರಶಸ್ತಿ ಪ್ರದಾನ ಸಮಾರಂಭ ; ಹಲವು ಗಣ್ಯರಿಗೆ ರಾಷ್ಟ್ರಪತಿಯವರಿಂದ ಸನ್ಮಾನ

೨. ಮೂರನೇ ಹಂತದ ಲೋಕಸಭಾ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಇಂದು ಕೊನೆಯ ದಿನ ; ಮೇ ೭ ರಂದು ಮತದಾನ

೩. ಫಿಡೆ ಕ್ಯಾಂಡಿಡೇಟ್ಸ್ -೨೦೨೪ರ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡ ಭಾರತದ ಡಿ. ಗುಕೇಶ್

೪. ಐಪಿಎಲ್ ಕ್ರಿಕೆಟ್ : ಇಂದು ರಾಜಸ್ಥಾನ ರಾಯಲ್ಸ್ - ಮುಂಬೈ ಇಂಡಿಯನ್ಸ್ ಹಣಾಹಣಿ

<><*<><>*><>

ಇಂದು ದೆಹಲಿಯ ರಾಷ್ಟ್ರಪತಿ ಭವನದಲ್ಲಿಂದು ನಡೆಯುವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಅವರು ಮಾಜಿ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಮತ್ತು ಭರತನಾಟ್ಯ ಕಲಾವಿದೆ ಡಾ ಪದ್ಮಾ ಸುಬ್ರಹ್ಮಣ್ಯಂ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಬಿಂದೇಶ್ವರ್ ಪಾಠಕ್ ಅವರಿಗೆ ಮರಣೋತ್ತರವಾಗಿ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಲಾಗುವುದು. ನಟ ಮಿಥುನ್ ಚಕ್ರವರ್ತಿ ಮತ್ತು ಗಾಯಕಿ ಉಷಾ ಉತ್ತುಪ್ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಇತರ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಲ್ಲಿ ಡಾ. ಸೀತಾರಾಮ್ ಜಿಂದಾಲ್, ಹೃದ್ರೋಗ ತಜ್ಞ ಡಾ ತೇಜಸ್ ಮಧುಸೂದನ್ ಪಟೇಲ್ ಮತ್ತು ಉತ್ತರ ಪ್ರದೇಶದ ಮಾಜಿ ರಾಜ್ಯಪಾಲ ರಾಮ್ ನಾಯಕ್ ಸೇರಿದ್ದಾರೆ. ಪ್ರತಿ ವರ್ಷ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪ್ರಶಸ್ತಿಗಳನ್ನು ಪ್ರಕಟಿಸಲಾಗುತ್ತದೆ.

<><*<><>*><>

ಮೂರನೇ ಹಂತದ ಲೋಕಸಭಾ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಇಂದು ಕೊನೆಯ ದಿನವಾಗಿದೆ. ಒಟ್ಟಾರೆ ೧೦ ರಾಜ್ಯಗಳ ಹಾಗೂ ೨ ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ ಒಟ್ಟಿ ೯೪ ಲೋಕಸಭಾ ಸ್ಥಾನಗಳಿಗೆ ಮೇ ೭ ರಂದು ಮತದಾನ ನಡೆಯಲಿದೆ. ಕರ್ನಾಟಕದ ೧೪, ಗುಜರಾತ್‌ನ ೨೬, ಮಹಾರಾಷ್ಟ್ರದ ೧೧, ಉತ್ತರಪ್ರದೇಶದ ೧೦, ಮಧ್ಯಪ್ರದೇಶದ ೮, ಛತ್ತೀಸ್‌ಗಢದ ೭, ಬಿಹಾರದ ೫, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದ ೪, ಗೋವಾ, ದಾದ್ರಾ-ನಗರ್‌ಹವೇಲಿ ಹಾಗೂ ದಿಯು ಮತ್ತು ಧಮನ್‌ನ ತಲಾ ೨ ಕ್ಷೇತ್ರ ಜಮ್ಮು-ಕಾಶ್ಮೀರದ ೧ ಕ್ಷೇತ್ರದಲ್ಲಿ ಮೇ ೭ ರಂದು ಚುನಾವಣೆ ನಡೆಯಲಿದೆ. ಏತನ್ಮಧ್ಯೆ, ಲೋಕಸಭಾ ಚುನಾವಣೆಯ ಎರಡನೇ ಹಂತ ಸಮೀಪಿಸುತ್ತಿದ್ದು, ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಅಭ್ಯರ್ಥಿಗಳ ಪರ ರ‍್ಯಾಲಿ ಮತ್ತು ರೋಡ್ ಶೋಗಳನ್ನು ನಡೆಸುವ ಮೂಲಕ ಮತದಾರರನ್ನು ಸೆಳೆಯಲು ಸರ್ವಪ್ರಯತ್ನ ಮಾಡುತ್ತಿದ್ದಾರೆ.

ಕೇರಳದಲ್ಲಿ ೨೦, ಕರ್ನಾಟಕದಲ್ಲಿ ೧೪, ರಾಜಸ್ಥಾನದಲ್ಲಿ ೧೩, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ತಲಾ ಎಂಟು, ಮಧ್ಯಪ್ರದೇಶದಲ್ಲಿ ಏಳು, ಅಸ್ಸಾಂ ಮತ್ತು ಬಿಹಾರದಲ್ಲಿ ತಲಾ ಐದು, ಪಶ್ಚಿಮ ಬಂಗಾಳ ಮತ್ತು ಛತ್ತೀಸ್‌ಗಢದಲ್ಲಿ ತಲಾ ಮೂರು ಮತ್ತು ತ್ರಿಪುರ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ತಲಾ ಒಂದು ಸ್ಥಾನಗಳಿಗಾಗಿ ಈ ತಿಂಗಳ ೨೬ ರಂದು ಎರಡನೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಬಿಜೆಪಿಯ ಹಿರಿಯ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಂದು ಉತ್ತರಪ್ರದೇಶದ ಅಲಿಘರ್ ನಲ್ಲಿ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಲಿದ್ದಾರೆ. ಈ ಸ್ಥಾನಕ್ಕಾಗಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು, ಬಿಜೆಪಿಯಿಂದ ಸತೀಶ್ ಗೌತಮ್, ಸಮಾಜವಾದಿ ಪಕ್ಷದ ಚೌಧರಿ ಬ್ರಿಜೇಂದ್ರ ಸಿಂಗ್, ಮತ್ತು ಬಹುಜನ ಸಮಾಜಪಕ್ಷದ ಹಿತೇಂದ್ರ ಕುಮಾರ್ ಕಣದಲ್ಲಿದ್ದಾರೆ. ಬಿಜೆಪಿ ಮುಖಂಡ ಮತ್ತು ಕೇಂದ್ರ ಸಚಿವ ವಿ.ಕೆ. ಸಿಂಗ್, ಕೇರಳದ ಚಲಕ್ಕುಡಿಯಲ್ಲಿಂದು ಎನ್‌ಡಿಎ ಅಭ್ಯರ್ಥಿ ಪರ ಪ್ರಚಾರ ನಡೆಸಲಿದ್ದಾರೆ. ಸಂಜೆ ನಡೆಯಲಿರುವ ಸಾರ್ವಜನಿಕ ಸಭೆಯಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮ ಭಾಗವಹಿಸಲಿದ್ದು, ಎರ್ನಾಕುಲಂನಲ್ಲಿ ರೋಡ್ ಶೋ ನಡೆಸಲಿದ್ದಾರೆ. ಈ ಮಧ್ಯೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಅನಾರೋಗ್ಯದ ಹಿನ್ನೆಲೆ ತ್ರಿಶೂರ್ ಮತ್ತು ಆಳಪುಳದಲ್ಲಿ ನಿಗದಿಯಾಗಿದ್ದ ಕಾರ್ಯಕ್ರಮಗಳನ್ನು ರದ್ದುಗೊಳಿಸಿದ್ದಾರೆ. ಸಿಪಿಐ-ಎಂನ ಮುಖಂಡ ಪ್ರಕಾಶ್ ಕಾರಟ್, ಕಾಸರಗೋಡಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದು, ಪಕ್ಷದ ಮತ್ತೊಬ್ಬ ಮುಖಂಡರಾದ ಬೃಂದಾ ಕರಟ್, ಪತನಮ್‌ತಿಟ್ಟಾದಲ್ಲಿ ಹಾಗೂ ಸುಭಾಷಿಣಿ ಅಲಿ ಅತ್ತಿಂಗಲ್‌ನಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲಿದ್ದಾರೆ. ಸಿಪಿಐನ ಪಕ್ಷದ ಅಧ್ಯಕ್ಷ ಮತ್ತು

ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಮತ್ತು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಡಿ. ರಾಜಾ, ಕಣ್ಣೂರು ಕ್ಷೇತ್ರದ ಹಲವೆಡೆ ಸಭೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

<><*<><>*><>

ಪೂರ್ವ ಭಾರತದಲ್ಲಿ ಮುಂದಿನ ೪ ದಿನಗಳವರೆಗೆ ತೀವ್ರ ಉಷ್ಣಗಾಳಿಯ ಪರಿಸ್ಥಿತಿಗಳು ಮುಂದುವರೆಯಲಿವೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಪಶ್ಚಿಮಬಂಗಾಳ, ಜಾರ್ಖಂಡ್, ಬಿಹಾರ್ ಮತ್ತು ಉತ್ತರಪ್ರದೇಶದಲ್ಲಿಯೂ ೪ ದಿನಗಳವರೆಗೆ ಉಷ್ಣಹಬೆ ಮುಂದುವರೆಯಲಿದೆ. ಇನ್ನು ಉಷ್ಣ ಮತ್ತು ತೇವಾಂಶಯುತ ಹವಾಮಾನ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಪುದುಚೇರಿ ಮತ್ತು ಕೇರಳದಲ್ಲಿ ಇದೇ ೨೫ರವರೆಗೆ ಮುಂದುವರೆಯಲಿದೆ ಎಂದು ಇಲಾಖೆ ತಿಳಿಸಿದೆ. ಈಶಾನ್ಯ ಹಾಗೂ ದಕ್ಷಿಣಭಾರತದಲ್ಲಿ ಮೂರುದಿನಗಳವರೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಇನ್ನು ಮಧ್ಯಪ್ರದೇಶ, ಮಹಾರಾಷ್ಟ್ರ, ಛತ್ತೀಸ್‌ಗಢದಲ್ಲಿ ಬಿರುಗಾಳಿ ಸಹಿತ ಮಳೆಯಾಗಲಿದೆ ಎಂದು ಇಲಾಖೆ ಪ್ರಕಟಿಸಿದೆ. ಚುನಾವಣಾ ಸಂದರ್ಭ ಹಿನ್ನೆಲೆ ಹವಾಮಾನ ಇಲಾಖೆಯ ಸಾಮಾನ್ಯಕ್ಕಿಂತ ಅಧಿಕ ತಾಪಮಾನ ಮತ್ತು ಬಿಸಿಗಾಳಿಯ ಮುನ್ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಚುನಾವಣಾ ಆಯೋಗ ಈ ಪರಿಸ್ಥಿತಿಗಳಿಂದ ಉಂಟಾಗುವ ಅಪಾಯವನ್ನು ತಗ್ಗಿಸುವ ಕ್ರಮಗಳ ಕುರಿತು ಪ್ರಮುಖ ಪಾಲುದಾರರೊಂದಿಗೆ ಸಮಾಲೋಚಿಸುತ್ತಿದೆ.

<><*<><>*><>

ಬಿಹಾರದಲ್ಲಿ ಲೋಕಸಭಾ ಚುನಾವಣೆಗಳಿಗಾಗಿ ಒಟ್ಟು ಸಲ್ಲಿಕೆಯಾಗಿದ್ದ ೯೬ ನಾಮಪತ್ರಗಳಲ್ಲಿ ೫೪ ಅಭ್ಯರ್ಥಿಗಳ ನಾಮಪತ್ರಗಳನ್ನು ಸಿಂಧು ಎಂದು ಪರಿಗಣಿಸಲಾಗಿದ್ದು, ೪೨ ನಾಮಪತ್ರಗಳು ತಿರಸ್ಕೃತಗೊಂಡಿವೆ. ಅರಾರಿಯಾ ಲೋಕಸಭಾ ಕ್ಷೇತ್ರಕ್ಕಾಗಿ ೨೯ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಅವುಗಳ ಪೈಕಿ ಅತಿ ಹೆಚ್ಚು ೨೦ ನಾಮಪತ್ರಗಳು ತಿರಸ್ಕೃತಗೊಂಡಿವೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ತಿಳಿಸಿದೆ. ಮಹಾರಾಷ್ಟ್ರದಲ್ಲಿ ಲೋಕಸಭಾ ಚುನಾವಣೆಗಾಗಿ ಒಟ್ಟು ೩೬೧ ಅಭ್ಯರ್ಥಿಗಳು ರಾಜ್ಯದ ೧೧ ಕ್ಷೇತ್ರಗಳಿಗಾಗಿ ಸಲ್ಲಿಸಿದ್ದ ನಾಮಪತ್ರಗಳಲ್ಲಿ ೩೧೭ ಅಭ್ಯರ್ಥಿಗಳ ನಾಮಪತ್ರಗಳು ಸಿಂಧು ಎಂದು ಪರಿಗಣಿಸಲಾಗಿದೆ. ಒಟ್ಟು ೪೪ ನಾಮಪತ್ರಗಳು ತಿರಸ್ಕೃತಗೊಂಡಿದ್ದು, ೩ನೇ ಹಂತದಲ್ಲಿ ಮೇ ೭ ರಂದು ಇಲ್ಲಿ ಚುನಾವಣೆ ನಡೆಯಲಿದೆ.

<><*<><>*><>

ಇಂದು ಜಾಗತಿಕ ಭೂಮಿ ದಿನ. ಹವಾಮಾನ ಬದಲಾವಣೆಯ ಪರಿಣಾಮ ಮತ್ತು ಪರಿಸರ ಸಂರಕ್ಷಿಸುವ ಮಾರ್ಗಗಳ ಬಗ್ಗೆ ಜನಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಪ್ರಸಕ್ತ ವರ್ಷದ ಜಾಗತಿಕ ಭೂಮಿ ದಿನಾಚರಣೆಯ ಘೋಷವಾಕ್ಯ ಪ್ಲಾಸ್ಟಿಕ್ ವಿರುದ್ಧ ಭೂಗ್ರಹ ಎಂಬುದಾಗಿದೆ. ಈ ದಿನವನ್ನು ೧೯೭೦ರಲ್ಲಿ ಯುಎಸ್ಎ ನಲ್ಲಿ ಮೊದಲ ಬಾರಿಗೆ ಆಚರಿಸಲಾಯಿತು. ಆರೋಗ್ಯಕರ ಭೂಗ್ರಹ ಮತ್ತು ಉತ್ತಮ ಭವಿಷ್ಯಕ್ಕಾಗಿ ಹಾಗೂ ಪರಿಸರದ ಸಂರಕ್ಷಣೆ ಮತ್ತು ಸುಸ್ಥಿರತೆಗೆ ಪ್ರತಿಯೊಬ್ಬರ ಒಗ್ಗಟ್ಟಿನ ಶ್ರಮದ ಪ್ರಾಮುಖ್ಯತೆಯನ್ನು ಈ ದಿನ ಸಾರುತ್ತದೆ.

<><*<><>*><>

ನಾಲ್ಕು ವರ್ಷದ ಪದವಿ ಹೊಂದಿರುವವರು ನೇರವಾಗಿ ರಾಷ್ಟೀಯ ಅರ್ಹತಾ ಪರೀಕ್ಷೆ ಎನ್ಇಟಿ ಗೆ ಹಾಜರಾಗಿ, ಯಾವುದೇ ವಿಷಯದಲ್ಲಿ ಪಿಎಚ್‌ಡಿ ಪದವಿ ಗಳಿಸಬಹುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ - ಯುಜಿಸಿ ಘೋಷಿಸಿದೆ. ಅಭ್ಯರ್ಥಿಗಳು ಕನಿಷ್ಠ ೭೫ ಪ್ರತಿಶತ ಅಂಕಗಳನ್ನು ಅಥವಾ ಅದಕ್ಕೆ ಸಮಾನವಾದ ಗ್ರೇಡಿಂಗ್ ಅಂಕಗಳು ಪಡೆದಿರುವುದು ಕಡ್ಡಾಯವಾಗಿದೆ. ಅಭ್ಯರ್ಥಿಗಳು ಯಾವುದೇ ವಿಷಯಗಳಲ್ಲಿ ಪದವಿ ಪಡೆದಿದ್ದರೂ, ತಾವು ಪಿಎಚ್‌ಡಿ ಮಾಡಲು ಬಯಸುವ ಐಚ್ಛಿಕ ವಿಷಯದಲ್ಲಿಯೇ ಪರೀಕ್ಷೆ ಎದುರಿಸಬೇಕಾಗುತ್ತದೆ ಎಂದು ಯುಜಿಸಿ ತಿಳಿಸಿದೆ.

<><*<><>*><>

ಭಾರತದ ಡಿ. ಗುಕೇಶ್ ಫಿಡೆ ಕ್ಯಾಂಡಿಡೇಟ್ಸ್ -೨೦೨೪ರ ೧೭ ವರ್ಷದ ಅತಿ ಕಿರಿಯ ಚೆಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಟೊರೆಂಟೊದಲ್ಲಿ ನಿನ್ನೆ ರಾತ್ರಿ ನಡೆದ ಪಂದ್ಯಾವಳಿಯಲ್ಲಿ ಗುಕೇಶ್, ಅಮೆರಿಕದ ಹಿಕರು ನಕಮುರಾ ಅವರ ವಿರುದ್ಧ ಡ್ರಾ ಮಾಡಿಕೊಂಡರು. ಅಮೆರಿಕದ ಫ್ಯಾಬಿಯಾನೊ ಮತ್ತು ರಷ್ಯಾದ ಇಯಾನ್ ನಡುವಿನ ಪಂದ್ಯ ಡ್ರಾಗೆ ಕೊನೆಗೊಂಡ ಹಿನ್ನೆಲೆ ಅಂಕಗಳ ಆಧಾರದ ಮೇಲೆ ಗುಕೇಶ್ ಚಾಂಪಿಯನ್ ಪಟ್ಟ ಅಲಂಕರಿಸಿದರು. ಈ ಗೆಲುವಿನ ಮೂಲಕ ಗುಕೇಶ್ ವಿಶ್ವ ಚೆಸ್ ಚಾಂಪಿಯನ್ ಶಿಪ್‌ನಲ್ಲಿ ಚೀನಾದ ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಅವರ ಸವಾಲನ್ನು ಎದುರಿಸಲಿದ್ದಾರೆ. ಮತ್ತೊಂದು ಪಂದ್ಯದಲ್ಲಿ ಭಾರತದ ಪ್ರಜ್ಞಾನಂದಾ, ನಿಜತ್ ಅಬಸೊವಾ ರನ್ನು ಸೋಲಿಸಿದರು. ಹಾಗೂ ವಿದಿತ್ ಗುಜರಾತಿ ಅಲಿರೇಜಾ ವಿರುದ್ಧ ಡ್ರಾ ಗೆ ತೃಪ್ತಿಪಟ್ಟಿಕೊಂಡರು. ಮಹಿಳಾ ವಿಭಾಗದಲ್ಲಿ ವೈಶಾಲಿ ರಮೇಶ್ ಬಾಬು, ರಷ್ಯಾದ ಕತ್ರೇನಾ ಲ್ಯಾಗ್ನೊ ಅವರನ್ನು ಪರಾಭವಗೊಳಿಸಿದರು.

<><*<><>*><>

ಕೇಂದ್ರ ಮೀಸಲು ಪೊಲೀಸ್ ಪಡೆ, ಇಂಡೋ ಟಿಬೇಟನ್ ಗಡಿ ಪೊಲೀಸ್ ಮತ್ತು ತುರ್ತು ಕ್ಷಿಪ್ರ ಕಾರ್ಯಪಡೆ ರಾಜಕೀಯವಾಗಿ ಸೂಕ್ಷ್ಮವಾಗಿರುವ ಕೇರಳದ ಕಣ್ಣೂರು ಜಿಲ್ಲೆಗೆ ಆಗಮಿಸಿವೆ. ಮಾವೋವಾದಿ ಪೀಡಿತ ಸೇರಿದಂತೆ ಇತರ ಸೂಕ್ಷ್ಮ ಪ್ರದೇಶಗಳಿಗೂ ಈ ಪಡೆಗಳನ್ನು ನಿಯೋಜಿಸಲಾಗುತ್ತಿದೆ. ಏತನ್ಮಧ್ಯೆ ಕೇರಳ ಪ್ರದೇಶ್ ಕಾಂಗ್ರೆಸ್ ಸಮಿತಿ ೭ ಜಿಲ್ಲೆಗಳಲ್ಲಿ ಚುನಾವಣಾ ಕಾರ್ಯಗಳಿಗಾಗಿ ನಿಯೋಜನೆಗೊಂಡಿರುವ ಅಧಿಕಾರಿಗಳಿಗೆ ಅಂಚೆ ಮತಪತ್ರ ತಲುಪಿಲ್ಲ ಎಂದು ಮುಖ್ಯ ಚುನಾವಣಾಧಿಕಾರಿಗಳಿಗೆ ದೂರು ನೀಡಿದ್ದಾರೆ.

<><*<><>*><>

ಮಣಿಪುರದಲ್ಲಿ ಇಂದು ಇನ್ನರ್ ಮಣಿಪುರ ಸಂಸದೀಯ ಕ್ಷೇತ್ರದ ಹನ್ನೊಂದು ಮತಗಟ್ಟೆಗಳಲ್ಲಿ ಮರು ಮತದಾನ ನಡೆಯಲಿದೆ. ಈ ಮತಗಟ್ಟೆಗಳಲ್ಲಿ ಇಂದು ಬೆಳಗ್ಗೆ ೭ ರಿಂದ ಸಂಜೆ ೫ ಗಂಟೆಯವರೆಗೆ ಮತದಾನ ನಡೆಸುವಂತೆ ರಾಜ್ಯ ಚುನಾವಣಾ ಪ್ರಾಧಿಕಾರಕ್ಕೆ ಚುನಾವಣಾ ಆಯೋಗ ಸೂಚಿಸಿತ್ತು.

<><*<><>*><>

ಮಾಲ್ಡೀವ್ಸ್‌ನಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ೮೬ ಸ್ಥಾನಗಳ ಪೈಕಿ ೬೬ ಸ್ಥಾನಗಳನ್ನು ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್ ಜಯಿಸಿದೆ ಎಂದು ಮಾಲ್ಡೀವ್ಸ್ ಚುನಾವಣಾ ಆಯೋಗ ತಿಳಿಸಿದೆ. ೨೦೧೯ರಲ್ಲಿ ಬಹುಮತ ಗಳಿಸಿದ ಮಾಲ್ಡೀವಿಯನ್ ಡೆಮೊಕ್ರಟಿಕ್ ಪಾರ್ಟಿ ಈ ಬಾರಿ ಕೇವಲ ೧೧ ಸ್ಥಾನಗಳನ್ನು ಗೆದ್ದಿದೆ.

<><*<><>*><>

ಜೈಪುರದ ಸವಾಯಿ ಮಾನ್ಸಿಂಗ್ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐಪಿಎಲ್ ಟಿ-೨೦ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡ, ಮುಂಬೈ ಇಂಡಿಯನ್ಸ್ ತಂಡದೊಂದಿಗೆ ಸೆಣಸಲಿದೆ. ಪಂದ್ಯ ಸಂಜೆ ೭:೩೦ ಕ್ಕೆ ಆರಂಭವಾಗಲಿದೆ. ಚಂಡೀಗಢದ ಮಹಾರಾಜ ಯದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡ, ಪಂಜಾಬ್ ಕಿಂಗ್ಸ್ ವಿರುದ್ಧ ಮೂರು ವಿಕೆಟ್‌ಗಳಿಂದ ಜಯ ಸಾಧಿಸಿದೆ.

<><*<><>*><>

ಟರ್ಕಿಯ ಅಂಟಾಲ್ಯಾದಲ್ಲಿ ನಿನ್ನೆ ನಡೆದ ವಿಶ್ವ ಅಥ್ಲೆಟಿಕ್ಸ್ ವಾಕಿಂಗ್ ಟೀಮ್ ಚಾಂಪಿಯನ್‌ಶಿಪ್ ೨೦೨೪ ರ ಮ್ಯಾರಥಾನ್ ಓಟ ನಡಿಗೆಯ ಮಿಶ್ರ ರಿಲೇ ಸ್ಪರ್ಧೆಯಲ್ಲಿ ಭಾರತದ ಪ್ರಿಯಾಂಕಾ ಗೋಸ್ವಾಮಿ ಮತ್ತು ಅಕ್ಷದೀಪ್ ಸಿಂಗ್ ೧೮ನೇ ಸ್ಥಾನ ಗಳಿಸುವ ಮೂಲಕ ೨೦೨೪ ರ ಪ್ಯಾರಿಸ್

ಒಲಿಂಪಿಕ್ ಗೆ ಅರ್ಹತೆ ಪಡೆದುಕೊಂಡಿದ್ದಾರೆ. ಓಟದ ನಡಿಗೆ ವಿಭಾಗಗಳಿಗೆ ಮ್ಯಾರಥಾನ್ ಮಿಶ್ರ ರಿಲೇ ಸ್ಪರ್ಧೆ ಹೊಸ ಸೇರ್ಪಡೆಯಾಗಿದ್ದು, ಒಲಿಂಪಿಕ್ಸ್‌ನಲ್ಲಿ ಮೊದಲಬಾರಿಗೆ ಈ ಸ್ಪರ್ಧೆಗೆ ಅವಕಾಶ ಮಾಡಿಕೊಡಲಾಗುತ್ತಿದೆ.

<><*<><>*><>

ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಫ್ರಾನ್ಸ್‌ಗೆ ಅಧಿಕೃತ ಭೇಟಿ ಕೈಗೊಂಡಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಗಣನೀಯ ವೃದ್ಧಿಯಾಗಿರುವ ಎರಡು ರಾಷ್ಟ್ರಗಳ ನಡುವಿನ ದೃಢ ರಕ್ಷಣಾ ಬಾಂಧವ್ಯಗಳನ್ನು ಮತ್ತಷ್ಟು ಬಲಪಡಿಸುವುದು ಈ ಭೇಟಿಯ ಗುರಿಯಾಗಿದೆ. ಭೇಟಿಯ ಸಮಯದಲ್ಲಿ ಅವರು, ತಮ್ಮ ಸಹವರ್ತಿ ಥಿಯೆರಿ ಬುರ್ಖಾರ್ಡ್ ಸೇರಿದಂತೆ ಫ್ರಾನ್ಸ್‌ನ ಹಿರಿಯ ನಾಗರಿಕ ಮತ್ತು ಮಿಲಿಟರಿ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ. ರಕ್ಷಣಾ ಸಿಬ್ಬಂದಿ ಮುಖ್ಯಸ್ಥರು ಫ್ರೆಂಚ್ ಬಾಹ್ಯಾಕಾಶ ಕಮಾಂಡ್ ಮತ್ತು ಲ್ಯಾಂಡ್ ಫೋರ್ಸಸ್ ಕಮಾಂಡ್‌ಗೆ ಭೇಟಿ ನೀಡಲಿದ್ದಾರೆ ಮತ್ತು ಎಕೋಲ್ ಮಿಲಿಟೈರ್ - ಮಿಲಿಟರಿ ಶಾಲೆಯಲ್ಲಿ ಸೈನ್ಯದ ಮತ್ತು ಜಂಟಿ ಸಿಬ್ಬಂದಿ ಕೋರ್ಸ್‌ನ ವಿದ್ಯಾರ್ಥಿ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಅವರು ಸಫ್ರಾನ್ ಗ್ರೂಪ್, ನೇವಲ್ ಗ್ರೂಪ್ ಮತ್ತು ಡಸಾಲ್ಟ್ ಏವಿಯೇಷನ್ ಸೇರಿದಂತೆ ಫ್ರಾನ್ಸ್‌ನ ಕೆಲವು ಪ್ರತಿಷ್ಠಿತ ರಕ್ಷಣಾ ಉದ್ಯಮಗಳಿಗೆ ಭೇಟಿ ನೀಡುವ ಮತ್ತು ಮಾತುಕತೆ ನಡೆಸುವ ಸಾಧ್ಯತೆಯಿದೆ. ಜನರಲ್ ಚೌಹಾಣ್ ಅವರು ನ್ಯೂವ್-ಚಾಪೆಲ್ಲೆ ಸ್ಮಾರಕ ಮತ್ತು ವಿಲ್ಲರ್ಸ್-ಗ್ವಿಸ್ಲೇನ್‌ನಲ್ಲಿರುವ ಭಾರತೀಯ ಸ್ಮಾರಕಕ್ಕೆ ಭೇಟಿ ನೀಡಲಿದ್ದು, ಮೊದಲ ವಿಶ್ವಯುದ್ಧದ ಸಮಯದಲ್ಲಿ ತ್ಯಾಗ ಮಾಡಿದ ಭಾರತೀಯ ವೀರ ಯೋಧರ ಪುಷ್ಪ ನಮನ ಸಲ್ಲಿಸಲಿದ್ದಾರೆ.

<><*<> ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೨೦ ಕ್ಕೆ <>*><>